


# ಕಾರು ಸ್ಪರ್ಧೆ ಜೋರು!

ಭಾರತದಲ್ಲಿರುವ ಕಾರ್ ರೇಸ್ ಚಾಲಕರ ಪೈಕಿ ಶೇಕಡಾ 50ರಷ್ಟು ಮಂದಿ ನಮ್ಮ ರಾಜ್ಯದಲ್ಲಿದ್ದಾರೆ. ಇಲ್ಲಿ ಹತ್ತಾರು ವಿಭಾಗಗಳ ಮೋಟೊಕ್ರಾಸ್ ಸ್ಪರ್ಧೆಗಳು ನಡೆಯುತ್ತವೆ.

■ ಗಿರೀಶ ದೊಡ್ಡಮನಿ

**ಬೂಮ್...ಬೂಮ್..**

ಸದ್ದು ಹೊರಡಿಸುತ್ತ ಬಂದೂಕಿನ ನಳಿಗೆಯಿಂದ ಹೊರಟ ಗುಂಡಿನ ವೇಗದಲ್ಲಿ ಸಾಗುವ ಕಾರುಗಳನ್ನು ನೋಡುವವರ ಎದೆಯಲ್ಲಿ ರೋಮಾಂಚನದ ಅಲೆಗಳು ಏಳದೇ ಇರುತ್ತವೆಯೇ?

ಕಾರು ಎನ್ನುವ ಎರಡು ಅಕ್ಷರಗಳ ಶಬ್ದ ಕ್ಕಿರುವ ಆಕರ್ಷಣೆಯೇ ಅಂತಹದ್ದು. ಬುದ್ಧಿ ತಿಳಿಯುವ ಮುನ್ನವೇ ಮಕ್ಕಳಲ್ಲಿ ಕಾರು ಓಡಿಸುವ ಹಂಬಲ ಕುಡಿಯೊಡೆದಿರುತ್ತದೆ.

ದೊಡ್ಡವರಾದಂತೆ ಕೆಲವರಿಗೆ ಅದು ಐಷಾರಾಮಿ ಸಾಧನವಾದರೆ, ಇನ್ನು ಕೆಲವರಿಗೆ ಉದ್ಯೋಗದ ಹಾದಿ (ಟ್ಯಾಕ್ಸಿ), ಮತ್ತೆ ಕೆಲವರಿಗೆ ಪ್ರೀತಿಯ ವಾಹನ ಆಗುತ್ತದೆ. ಆದರೆ, ಇನ್ನು ಕೆಲವೇ ಜನರಿಗೆ ಅದು ಸಾಹಸದ ಮಾಧ್ಯಮವಾಗುತ್ತದೆ. ಜೀವನವನ್ನೇ ಪಣಕ್ಕಿಟ್ಟು ಕಾರ್ ರೇಸ್ ಚಾಲಕರಾಗುತ್ತಾರೆ. ನಾಲ್ಕು ಚಕ್ರದ ವಾಹನಗಳು ಅವರ ಸರ್ವಸ್ವವೇ ಆಗುತ್ತದೆ.

ಮಾರುತಿ ಸ್ವಿಫ್ಟ್, ಜೆನ್, ಒಪೆಲ್, ಫೋರ್ಡ್, ಮಾರುತಿ ಜಿಪ್ಸಿಯಂತಹ ದುಬಾರಿ ವಾಹನಗಳು ದೂಳೆಬ್ಬಿಸುತ್ತ ರೇಸ್ ಟ್ರ್ಯಾಕ್, ಕಾಡುಮೇಡುಗಳ ಹಾದಿಯಲ್ಲಿ ಓಡುವ ಪರಿಗೆ ಸಾಹಸಪ್ರಿಯರು ಮನಸೋಲುತ್ತಾರೆ.

ಆಟೋಕ್ರಾಸ್, ಆಫ್‌ರೋಡ್ ರ್‍ಯಾಲಿ , ಗುಡ್ಡಾಗಾಡು ಸ್ಪರ್ಧೆಗಳಲ್ಲಿ ತಮ್ಮ ಸಾಧನೆಯ ಹಾದಿ ಅರಸುತ್ತಾರೆ. ಇದು ಅಪಾಯಕಾರಿ ಆಟದ ಜೊತೆಗೆ ಜೇಬು ಖಾಲಿ ಮಾಡುವ ದುಬಾರಿ ಸಾಹಸವೂ ಹೌದು. ಈ ಕ್ರೀಡೆಯಲ್ಲಿ ಕರ್ನಾಟಕವೇ ಮುಂದಿದೆ ಎಂಬುದು ಹೆಮ್ಮೆಯ ವಿಷಯ.

**ಬೆಂಗಳೂರು ರಾಜಧಾನಿ**

ಭಾರತದಲ್ಲಿರುವ ಕಾರ್ ರೇಸ್ ಚಾಲಕರ ಪೈಕಿ ಶೇ 50ರಷ್ಟು ಮಂದಿ ನಮ್ಮ ರಾಜ್ಯದಲ್ಲಿದ್ದಾರೆ. ಇಲ್ಲಿ ಹತ್ತಾರು ವಿಭಾಗಗಳ ಮೋಟೊಕ್ರಾಸ್

